THE MYSORE LEGISLATIVE ASSEMBLY

TWENTY-FIRST DAY.

Thursday, 17th March 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

High School for Mirle.

Q.—57. **Sri S. H. THAMMIAH *alias* HANUMANTHEGOWDARA THAMMIAH** (Krishnarajanagar).—

Will the Government be pleased to state :—

(*a*) how many years back the residents of Mirle Village, Krishnarajanagar Taluk, deposited Rs. 25,000 in Government Treasury on the assurance of Government for the establishment of a High School ;

(*b*) the reason for not sanctioning the High School ?

A.—**Sri A. G. RAMACHANDRA RAO** (Minister for Law and Education).—

(*a*) The amount deposited and the dates on which the deposit was made are noted below :—

		Rs.
1st February 1950	...	21,500
22nd May 1950	...	1,000
6th July 1950	...	657
10th April 1951	...	620
Total	...	23,777
4th September 1954 interest.		1,447
Total	...	25,224

Rs. 25,224 have been deposited between 1st February 1950 to 4th September 1954. There has been no particular assurance from Government except that the question would be considered if funds are forthcoming.

(*b*) There are two High Schools within a radius of 5 miles. Moreover, no agency has come forward to start and maintain the High School.

ಶ್ರೀ ಎಸ್. ಎಚ್. ತಮ್ಮಯ್ಯ.—ತಾವು ಈಗ ಒದಗಿಸಿರುವ ಉತ್ತರದಲ್ಲಿ ಸರ್ಕಾರದವರು ಅಂಥ ಯಾವ ಭರವಸೆಗಳನ್ನೂ ಕೊಟ್ಟಿರಲಿಲ್ಲ ಎಂದು ತಿಳಿಸಿದ್ದೀರಿ. ಯಾವ ಆಧಾರದ ಮೇಲೆ ತಾವು ಈ ಉತ್ತರ ಒದಗಿಸಿದ್ದೀರಿ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಭರವಸೆ ಕೊಟ್ಟಿರತಕ್ಕ ಬಗ್ಗೆ ಯಾವ ದಾಖಲೆಯೂ ನಮಗೆ ಸಿಕ್ಕಿಲ್ಲ.

ಶ್ರೀ ಎಸ್. ಎಚ್. ತಮ್ಮಯ್ಯ.—ಮೈಸೂರು ಜಿಲ್ಲಾ ಬೋರ್ಡ್‌ನವರು ಈ ಹೈಸ್ಕೂಲನ್ನು ನಾವು ನಡೆಸಿಕೊಂಡು ಹೋಗುತ್ತೇವೆ, ಸರ್ಕಾರದವರು ಗ್ರಾಂಟನ್ನು ಕೊಡಿ ಎಂದು ಈಗ ಅವರಿಂದ ಪತ್ರ ವ್ಯವಹಾರವೇನೂ ನಡೆದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಎಸ್. ಎಚ್. ತಮ್ಮಯ್ಯ.—ಈಗಲಾದರೂ ಜಾಗ್ರತೆ ಮಿರ್ಲೆ ಗ್ರಾಮಕ್ಕೆ ಹೈಸ್ಕೂಲನ್ನು ಮಂಜೂರು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಿರ್ಲೆ ಗ್ರಾಮಕ್ಕೆ ಐದು ಮೈಲಿ ಫಾಸಲೆಯೊಳಗೆ ಎರಡು ಹೈಸ್ಕೂಲುಗಳಿವೆ. ಆದರೆ ಹಾಗೊಂದುವೇಳೆ ಯಾರಾದರೂ ಖಾಸಗೀ ಮಹನೀಯರು ಮುಂದೆ ಬಂದು ಅವರು ಆ ಸ್ಕೂಲನ್ನು ನಡೆಸಿಕೊಂಡು ಹೋಗುವುದಾಗಿ ಹೇಳಿದರೆ, ಮತ್ತು ಅಲ್ಲಿಯ ಮುನಿಸಿಪಾಲಿಟಿ, ಜಿಲ್ಲಾ ಬೋರ್ಡ್‌ಗಳು ಈ ಸ್ಕೂಲನ್ನು ಸ್ಥಾಪಿನತಕ್ಕ ಬಗ್ಗೆ ಸಹಾಯ ನೀಡುವುದಾದರೆ, ಆಗ ಸರ್ಕಾರದವರೂ ಕೂಡ ತಮ್ಮ ಭಾಗದ ಸಹಾಯವನ್ನು ಕೊಟ್ಟೇ ಕೊಡುತ್ತಾರೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಹಾಗೆ ಐದು ಮೈಲಿಯ ಫಾಸಲೆಯಲ್ಲಿ ಎರಡು ಹೈಸ್ಕೂಲುಗಳು ಪ್ರಾರಂಭವಾದದ್ದು ಯಾವಾಗ ಮತ್ತು ನಾವು ಈ ಮಿರ್ಲೆ ಗ್ರಾಮಕ್ಕೆ ಹೈಸ್ಕೂಲು ಬೇಕೆಂದು ಅರ್ಜಿ ಕೊಟ್ಟಿದ್ದು ಯಾವಾಗ ? ಆ ಎರಡು ಹೈಸ್ಕೂಲುಗಳು ಪ್ರಾರಂಭವಾಗುವುದಕ್ಕೆ ಮೊದಲಿನಿಂದಲೂ ನಾವು ಕೇಳುತ್ತಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರಗಳೇನಿವೆಯೋ ಅವು ನನಗೆ ಗೊತ್ತಿಲ್ಲ.

---

* Asterisk indicates that the remarks or speeches have not been revised by the Member concerned.